ಇ) ಹೊಸದಾಗಿ ಪರವಾನಿಗೆ ಪಡೆದ ಸಕ್ಕರೆ ಕಾರ್ಖಾನೆಗಳಿಗೆ ಹಣಕಾಸಿನ ತೊಂದರೆ ಉಂಟಾಗಿರುವುದು ನಿಜವೆ?

ಈ) ಈ ಕಾರ್ಖಾನೆಗಳು ಕೂಡಲೇ ಕಾರ್ಯಾರಂಭ ಮಾಡಲು ಸರ್ಕಾರ ಕಾರ್ಯಕ್ರಮವೇನಾದರೂ ಹಾಕಿಕೊಂಡಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಸಹಕಾರಿ ವಲಯದಲ್ಲಿ 12, ಖಾಸಗಿ ವಲಯದಲ್ಲಿ 59, ಕಾರ್ಖಾನೆಗಳಿಗೆ ಅನುಮತಿ ಪತ್ರವನ್ನು (ಐ.ಇ.ಎಂ) ಭಾರತ ಸರ್ಕಾರ ನೀಡಿದೆ.

ಆ) ಸಹಕಾರ ವಲಯದಲ್ಲಿ ಒಂದು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ರನ್ನನಗರ ಇದು 1999-2000ರ ಸಾಲಿನಲ್ಲಿ ಕಾರ್ಯಾರಂಭಮಾಡಿರುತ್ತದೆ.

ಖಾಸಗಿ ವಲಯದ 59 ಸಕ್ಕರೆ ಕಾರ್ಖಾನೆಗಳಲ್ಲಿ 4 ಸಕ್ಕರೆ ಕಾರ್ಖಾನೆಗಳಾದ

1. ರೇಣುಕಾ ಶುಗರ್ಸ್, ಮನೋಳಿ ಸವದತ್ತಿ ತಾ:
2. ಪ್ರಭುಲಿಂಗೇಶ್ವರ ಶುಗರ್ಸ್ ಸಿದ್ದಾಪೂರ ಜಮಖಂಡಿ ತಾ:
3. ಐ.ಸಿ.ಎಲ್. ಶುಗರ್ಸ್ ಕೆ.ಆರ್ ಪೇಟೆ
4. ಶ್ಯಾಮನೂರು ಶುಗರ್ಸ್

ಈ ನಾಲ್ಕು ಸಕ್ಕರೆ ಕಾರ್ಖಾನೆಗಳು 99-2000ದ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಿರುತ್ತವೆ.

ಇ) ಇರಬಹುದು.

ಈ) ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯದ ಅಪೆಕ್ಸ್ ಬ್ಯಾಂಕ್ ನೇತೃತ್ವದಲ್ಲಿ ಸಮೂಹ ಬ್ಯಾಂಕುಗಳಿಂದ ಯೋಜನಾ ವೆಚ್ಚದ ಶೇ 60 ರಷ್ಟು ಹಣವನ್ನು ಅವಧಿ ಸಾಲವನ್ನಾಗಿ ನೀಡಲು ಒಪ್ಪಿರುತ್ತದೆ. ಅದರಂತೆ ಶೇ30 ರಷ್ಟು ಹಣವನ್ನು ರಾಜ್ಯ ಸರ್ಕಾರವು ಶೇರು ಧನದ ರೂಪದಲ್ಲಿ ನೀಡುವ ಯೋಜನೆ ಇರುತ್ತದೆ. ಖಾಸಗಿ ವಲಯದ ಕಾರ್ಖಾನೆಗಳು ತಮ್ಮದೇ ಆದಂತಹ ಆರ್ಥಿಕ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ.

ಗೋಕಾಕ್ ಬೆಂಗಳೂರು ಅಲ್ಟ್ರಾಡೀಲಕ್ಸ್ ಬಸ್ಸನ್ನು ಇಂಚಲ-ಬೈಲಹೊಂಗಲ ಮಾರ್ಗವಾಗಿ ಓಡಿಸುವುದು

3016 - ಶ್ರೀ ಕೌಜಲಗಿ ಮಹಾಂತೇಶ್ ಶಿವನಾಂದ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ಘಟಕದಿಂದ ಗೋಕಾಕ್ ಬೆಂಗಳೂರು ಅಲ್ಟ್ರಾ ಡೀಲಕ್ಸ್ ಬಸ್ಸನ್ನು ಸೌಂದತ್ತಿ ಮಾರ್ಗವಾಗಿ ಓಡಿಸುತ್ತಿರುವ ಸಂಗತಿ ನಿಜವೇ? ಗೋಕಾಕ್ ಕ್ಷೇತ್ರದ ಹಿಂದಿನ ಶಾಸಕರು

ಈ ಸಾರಿಗೆಯನ್ನು ಇಂಚಲ ಬೈಲಹೊಂಗಲ ಮಾರ್ಗವಾಗಿ ಓಡಿಸಲು ಪತ್ರ ಬರೆದ ಸಂಗತಿ ನಿಜವೇ ?

ಆ) ಸೌಂದತ್ತಿ ಮಾರ್ಗವಾಗಿ ಈಗಾಗಲೇ ಸುವಿಹಾರಿ ಬಸ್ಸುಗಳು ಬೆಂಗಳೂರಿಗೆ ಸಂಚರಿಸುತ್ತಿರುವ ಸಂಗತಿ ನಿಜವೇ ?

ಇ) ಉಪ ವಿಭಾಗ ಕೇಂದ್ರವಾದ ಬೈಲಹೊಂಗಲದಿಂದ ಬೆಂಗಳೂರಿಗೆ ಓಡಿಸುತ್ತಿದ್ದ ಸುವಿಹಾರಿ ವಾಹನ ರದ್ದುಪಡಿಸಿರುವ ಸಂಗತಿ ನಿಜವೇ ? ಪ್ರಸ್ತುತ ಬೈಲಹೊಂಗಲದಿಂದ ಬೆಂಗಳೂರಿಗೆ ಯಾವುದೇ ಸುವಿಹಾರಿ ವಾಹನ (ಸರ್ಕಾರಿ ಅಥವಾ ಖಾಸಗಿ) ಸೌಕರ್ಯ ಇಲ್ಲದಿರುವ ಸಂಗತಿ ನಿಜವೇ ?

ಈ) ಹಾಗಿದ್ದಲ್ಲಿ ಗೋಕಾಕ್- ಬೆಂಗಳೂರು ಅಲ್ಟ್ರಾ ಡೀಲಕ್ಸ್ ಬಸ್ಸನ್ನು ಇಂಚಲ-ಬೈಲಹೊಂಗಲ ಮಾರ್ಗವಾಗಿ ಓಡಿಸಲು ಕ್ರಮ ಕೈಗೊಳ್ಳಲಾಗುವುದೆ, ಬೈಲಹೊಂಗಲ ನಾಗರೀಕರ ಬೇಡಿಕೆಯಂತೆ ಬೈಲಹೊಂಗಲ ಘಟಕದಿಂದ ಬೆಂಗಳೂರಿಗೆ ಡೀಲಕ್ಸ್ ಬಸ್ಸನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಗೋಕಾಕ್ ಘಟಕದಿಂದ ಗೋಕಾಕ್- ಬೆಂಗಳೂರು ಅಲ್ಟ್ರಾ ಡೀಲಕ್ಸ್ ಸಾರಿಗೆಯನ್ನು ಸೌಂದತ್ತಿ ಮಾರ್ಗವಾಗಿ ಈ ಕೆಳಕಂಡ ವೇಳೆಯಲ್ಲಿ ಓಡಿಸಲಾಗುತ್ತಿದೆ.

ತಲುಪುವ ವೇಳೆ		ಬಿಡುವ ವೇಳೆ
09.00	ಗೋಕಾಕ್	19.45
07.15	ಸವದತ್ತಿ	21.30
20.45	ಬೆಂಗಳೂರು	08.00

ಹಿಂದಿನ ಮಾನ್ಯ ಶಾಸಕರು ಗೋಕಾಕ್-ಬೆಂಗಳೂರು ಸಾರಿಗೆಯನ್ನು ಇಂಚಲ-ಬೈಲಹೊಂಗಲ ಮಾರ್ಗವಾಗಿ ಓಡಿಸಲು ಪತ್ರ ಬರೆದಿರುತ್ತಾರೆ.

ಆ) ಈಗಾಗಲೇ ಸೌದತ್ತಿ ಮಾರ್ಗವಾಗಿ (1) ಅಥಣಿ ಬೆಂಗಳೂರು ಅಲ್ಟ್ರಾ ಡೀಲಕ್ಸ್ ಹಾಗೂ (2) ಜಮಖಂಡಿ- ಬೆಂಗಳೂರು ಅಲ್ಟ್ರಾ ಡೀಲಕ್ಸ್ ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ. ಅಥಣಿ-ಬೆಂಗಳೂರು ಸಾರಿಗೆಯು ಸವದತ್ತಿಯಿಂದ 20.30 ಗಂಟೆಗೆ ಹಾಗೂ ಜಮಖಂಡಿ-ಬೆಂಗಳೂರು ಸಾರಿಗೆಯು 21.00 ಗಂಟೆಗೆ ಬಿಡುತ್ತದೆ.

ಇ) ಈ ಹಿಂದೆ ಬೈಲಹೊಂಗಲದಿಂದ ಬೆಂಗಳೂರಿಗೆ ಓಡಿಸುತ್ತಿದ್ದ ಬೈಲಹೊಂಗಲ-ಬೆಂಗಳೂರು ಸುವಿಹಾರಿ ಸಾರಿಗೆಯನ್ನು ಜನದಟ್ಟಣೆ ಕಡಿಮೆ ಇದ್ದ ಪ್ರಯುಕ್ತ ರದ್ದುಗೊಳಿಸಲಾಗಿದೆ.

ಪ್ರಸ್ತುತ ವಾ.ಕ.ರ.ಸಾ. ಸಂಸ್ಥೆಯ ಯಾವುದೇ ಸುವಿಹಾರಿ ವಾಹನಗಳು ಬೈಲಹೊಂಗಲದಿಂದ ನೇರವಾಗಿ ಬೆಂಗಳೂರಿಗೆ ಕಾರ್ಯಾಚರಣೆಗೊಳ್ಳುತ್ತಿಲ್ಲ.

ಈ) ಪ್ರಸ್ತುತ ಗೋಕಾಕ್-ಬೆಂಗಳೂರು ಸಾರಿಗೆಯು ಜನಾನುರಾಗಿ ಸಾರಿಗೆಯಾದ್ದರಿಂದ, ಮಾರ್ಗ ಬದಲಾವಣೆ ಸಮಂಜಸವಾಗಲಾರದು. ಆದಾಗ್ಯೂ ಬೈಲಹೊಂಗಲ-ಬೆಂಗಳೂರು ಸಾರಿಗೆಯನ್ನು ಪ್ರಯಾಣಿಕರ ದಟ್ಟಣೆಯನ್ನು ಅನುಲಕ್ಷಿಸಿ, ಮರುಪ್ರಾರಂಭಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಸಹಕಾರ ಮತ್ತು ಖಾಸಗಿ ತಳಹದಿಯ ಮೇಲಿರುವ ನೂಲಿನ ಗಿರಣಿಗಳು

3017 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ನೂಲಿನ ಗಿರಣಿಗಳು ಸಹಕಾರಿ ಹಾಗೂ ಖಾಸಗಿ ವ್ಯಾಪ್ತಿಯಲ್ಲಿ ಸ್ಥಾಪನೆಗೊಂಡಿದೆ?

ಆ) ಇವುಗಳಲ್ಲಿ ಎಷ್ಟು ಗಿರಣಿಗಳು ಲಾಭದಲ್ಲಿವೆ? ಹಾಗೂ ಎಷ್ಟು ಗಿರಣಿಗಳು ನಷ್ಟದಲ್ಲಿವೆ? (ವಿವರ ನೀಡುವುದು)

ಇ) ನಷ್ಟದಲ್ಲಿರುವ ನೂಲಿನ ಗಿರಣಿಗಳನ್ನು ಲಾಭದಲ್ಲಿ ತರಲು ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದೆ?

ಈ) ಬೆಳಗಾವಿ ಜಿಲ್ಲೆ ಪಂತ್‌ಬಾಳೇಕುಂದ್ರಿ ಹಾಗೂ ಸವದತ್ತಿಯ ಮಲಪ್ರಭಾ ನೂಲಿನ ಗಿರಣಿಗಳು ಮುಚ್ಚಿಹೋಗಿದ್ದು ಇವುಗಳನ್ನು ಪುನಃ ಪ್ರಾರಂಭಿಸಲು ಸರ್ಕಾರಿ ಯಾವ ಕಾರ್ಯ ಕ್ರಮಕೈಗೊಂಡಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 12 ಸಹಕಾರಿ ನೂಲಿನ ಗಿರಣಿಗಳು ಸಹಕಾರ ವಲಯದಲ್ಲಿ ಮತ್ತು 48 ಗಿರಣಿಗಳು ಖಾಸಗಿ ವಲಯದಲ್ಲಿವೆ.

ಆ) ಸಹಕಾರಿವಲಯದಲ್ಲಿರುವ 12 ಗಿರಣಿಗಳಲ್ಲಿ 2 ಗಿರಣಿಗಳು ಸಮಾಪನೆಯಲ್ಲಿವೆ. 2 ಗಿರಣಿಗಳು ಕಾರ್ಯಸ್ಥಗಿತಗೊಂಡಿವೆ. ಉಳಿದ 8 ಗಿರಣಿಗಳು ನಷ್ಟದಲ್ಲಿ ನಡೆಯುತ್ತಿವೆಯಾದರೂ 2 ಗಿರಣಿಗಳು ಲಾಭದ ಅಂಚಿನಲ್ಲಿವೆ. ಖಾಸಗಿ ವಲಯದ ಗಿರಣಿಗಳ ಮೇಲೆ ಇಲಾಖೆಯ ಯಾವುದೇ ನಿಯಂತ್ರಣ ಇಲ್ಲದೇ ಇರುವುದರಿಂದ ಮಾಹಿತಿ ಲಭ್ಯವಿರುವುದಿಲ್ಲ. ಸಹಕಾರಿ ನೂಲಿನ ಗಿರಣಿಗಳ ಲಾಭ/ನಷ್ಟಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸಹಕಾರಿ ವಲಯದ ನೂಲಿನ ಗಿರಣಿಗಳ ಲಾಭನಷ್ಟದ ಹೊಣೆಗಾರಿಕೆಯು ಗಿರಣಿಯ ಆಡಳಿತ ಮಂಡಳಿಯ ಮೇಲಿದೆ. ಗಿರಣಿಯು ನಷ್ಟ ಅನುಭವಿಸದಂತೆ ಮಾಡಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳುವ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ. ಇದಲ್ಲದೆ ಜವಳಿ ಕ್ಷೇತ್ರದಲ್ಲಿ ಕಳೆದ 3